## ಎಷ್ಟನೇ ಕೆಜಿ?

ಶಿಕ್ಷಕಿಯಾದ ನಾನು ನಾಳೆ ಮಾಡಬೇಕಿರುವ ಪಾಠದ ಟಿಪ್ಪಣಿಗಳನ್ನು ಸಿದ್ಧಗೊಳಿಸುತ್ತಿದ್ದೆ. ನನ್ನ ಸಹೋದ್ಯೋಗಿಯ ಮಗಳು, ಮೂರು ವರ್ಷದ ವಿದ್ಯಾ ಮನೆಗೆ ಬಂದಳು. ನಾನು ಬರೆದುಕೊಳ್ಳುತ್ತಿರುವ ಟಿಪ್ಪಣಿಯನ್ನು ತದೇಕಚಿತ್ತದಿಂದ ನೋಡುತ್ತಿದ್ದವಳು 'ಮಿಸ್... ಮಿಸ್...' ಎಂದು ತಡೆತಡೆದು ಏನೊ ಹೇಳಲು ಹೋದಳು. ನಾನು ನನ್ನ ಕೆಲಸವನ್ನು ನಿಲ್ಲಿಸಿ ಅವಳತ್ತ ನೋಡಿ 'ಏನು ಪುಟ್ಟಾ?' ಎಂದೆ. 'ನೀವು ಎಷ್ಟು ಕೆಜಿ?' ಎಂದಳು. ನನಗೆ ಅವಳ ಪ್ರಶ್ನೆ ಅರ್ಥವಾಗಲಿಲ್ಲ. 'ಏನಂದೆ?' ಎಂದು ಮರು ಪ್ರಶ್ನೆ ಹಾಕಿದೆ. 'ಅದೇ ಮಿಸ್, ಈಗ ನಾನು ಎಲ್‌ಕೆಜಿ ಅಲ್ವಾ? ನೀವು ಎಷ್ಟನೇ ಕೆಜಿ?' ಎಂದು ಕೇಳಿದಳು. ಅವಳ ಪ್ರಶ್ನೆಗೆ ಚಕಿತಳಾಗಿ,'ನಾನಾ? 65 ಕೆಜಿ' ಎಂದು ಉತ್ತರಿಸಿದೆ.

**ಪ್ರಮೀಳಮ್ಮ**





## ಮೊಸರಲ್ಲಿ ಕಲ್ಲು

ಅಂದು ಭಾನುವಾರ ನಮ್ಮ ಸಂಬಂಧಿಕರಾದ ಗುಂಡುರಾಯರ ಮನೆಯಲ್ಲಿ ಮಗ, ಸೊಸೆ, ಅಪರೂಪಕ್ಕೆ ಬಂದ ಮಗಳು, ಅಳಿಯ ಮತ್ತು ಮೊಮ್ಮಗಳು ಒಟ್ಟಿಗೇ ಊಟಕ್ಕೆ ಕುಳಿತಿದ್ದರು. ಗುಂಡುರಾಯರ ಪತ್ನಿ ಎಲ್ಲರಿಗೂ ಊಟ ಬಡಿಸುತ್ತಿದ್ದರು. ನಾಲ್ಕು ವರ್ಷದ ಮೊಮ್ಮಗಳು ಅಲ್ಲಿ ಕಾಣಲಿಲ್ಲ. 'ಪುಟ್ಟಿ ಎಲ್ಲಿದ್ದೀಯ?' ಎಂದು ಕೂಗಿದಾಗ ಅಡುಗೆ ಮನೆಯಿಂದ ಧ್ವನಿ ಬಂತು. ಅವರು ಅಡುಗೆ ಮನೆಯೊಳಗೆ ಹೋದಾಗ ಮೊಸರಿನ ಪಾತ್ರೆಯ ತಳದವರೆಗೂ ಕೈ ಹಾಕಿ ಏನೊ ಹುಡುಕುತ್ತಿದ್ದಳು. 'ಊಟಕ್ಕೆ ಬಾ ಅಂದ್ರೆ ಇಲ್ಲೇನು ಮಾಡ್ತಾ ಇದ್ದೀಯ ಪುಟ್ಟಿ?' ಎಂದರು ಅಜ್ಜಿ. 'ಮತ್ತೆ ನೀವು ಪಕ್ಕದ ಮನೆ ಆಂಟಿ ಹತ್ರ ಹೇಳ್ತಾ ಇದ್ರಿ, ಮೊಸರಲ್ಲಿ ಕಲ್ಲು ಹುಡುಕಿದ ಹಾಗೆ... ಅಂತ? ಮೊಸರಲ್ಲಿನ ಆ ಕಲ್ಲು ಹೇಗಿರುತ್ತೆ ಅಂತ ನೋಡ್ತಾ ಇದ್ದೀನಿ' ಎಂದಾಗ ಅಜ್ಜಿಗೆ ಅರ್ಧ ಕೋಪ, ಅರ್ಧ ನಗು.

**ಅರವಿಂದ ಜೋಷಿ**